ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಸಚಿವರು).— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಕೆ. ವಸಂತಬಂಗೇರ.—ನನ್ನ ಪ್ರಶ್ನೆಯನ್ನು ನೀವು ತೆಗೆದುಕೊಳ್ಳಲಿಲ್ಲ. ದಯವಿಟ್ಟು ನನಗೆ ಅವಕಾಶ ಮಾಡಿಕೊಡಬೇಕು, ಅವಕಾಶ ಕೊಡುವುದಿಲ್ಲ ಅಂದರೆ ಹೇಗೆ ?

ಉಪಾಧ್ಯಕ್ಷರು.—ನಾನು ನಿಮ್ಮ ಹೆಸರನ್ನು ಕರೆದಾಗ ನೀವು ಇರಲಿಲ್ಲ. ಈಗ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ವಸಂತಬಂಗೇರ.—ಇಬ್ಬರು ಸದಸ್ಯರುಗಳಿಗೆ ಅವಕಾಶ ಮಾಡಿಕೊಟ್ಟಿದ್ದೀರಿ ನನಗೆ ಏತಕ್ಕೆ ಕೊಡುವುದಿಲ್ಲ ?

ಉಪಾಧ್ಯಕ್ಷರು.—ಅವು ತಡೆಹಿಡಿಯಲಾದ ಪ್ರಶ್ನೆಗಳು.

ಶ್ರೀ ಆರ್. ರಾಮಯ್ಯ.—ನನಗೆ ಅವಕಾಶ ಕೊಟ್ಟಿದ್ದೀರಿ.

ಶ್ರೀ ಕೆ. ವಸಂತಬಂಗೇರ.—ಅವರಿಗೆ ಅವಕಾಶ ಕೊಟ್ಟಮೇಲೆ ನನಗೆ ಏತಕ್ಕೆ ಕೊಡುವುದಿಲ್ಲ? ನೀವು ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡದಿದ್ದರೆ ನಾವು ಇಲ್ಲಿಗೆ ಏತಕ್ಕೆ ಬರಬೇಕು ? ಈ ರೀತಿ ತಾರತಮ್ಯ ಮಾಡುವುದು ಸರಿಯಲ್ಲ. ನನಗೆ ಪ್ರಶ್ನೆಯನ್ನು ಕೇಳಲಿಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ನಾನು ನಿಮ್ಮ ಹೆಸರನ್ನು ಕರೆದಾಗ ನೀವು ಇಲ್ಲಿ ಇರಲಿಲ್ಲ. ನೀವು ಸರಿಯಾದ ಸಮಯಕ್ಕೆ ಸದನಕ್ಕೆ ಬರಬೇಕು. ನಿಮ್ಮ ಹೆಸರನ್ನು ಕರೆದಾಗ ನೀವು ಪ್ರಶ್ನೆ ಕೇಳಬೇಕು. ಈಗ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ವಸಂತಬಂಗೇರ.—ನನಗೆ ಅವಕಾಶ ಕೊಡಿ, ನೀವು ಅವಕಾಶ ಕೊಡದಿದ್ದರೆ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ. ವಸಂತಬಂಗೇರರವರು ಸಭಾತ್ಯಾಗ ಮಾಡಿದರು)

ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ.

೨೪೮೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕಂದಾಪುರ).— ಮಾನ್ಯ ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೇ?

ಅ) ರಾಜ್ಯದ ಪ್ಲಾಂಟೇಷನ್ ಮಾಲೀಕರು ಒತ್ತುವರಿ ಮಾಡಿದ್ದ ಸರ್ಕಾರಿ ಭೂಮಿಯ ವಿಸ್ತೀರ್ಣ ಪೆಷ್ಟು?

ಆ) ಈ ಪೈಕಿ ಸಕ್ರಮಗೊಳಿಸಲಾಗಿರುವ ಮತ್ತು ಸಕ್ರಮಗೊಳಿಸಬೇಕಾಗಿರುವ ಭೂಮಿಯ ವಿಸ್ತೀರ್ಣ ಪೆಷ್ಟು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು)

ಅ) ೩೫,೦೫೫ ಎಕರೆ ೩೯ ಗುಂಟೆ (ದಿನಾಂಕ ೧-೧-೮೮ ರವರೆವಿಗೆ)

ಆ) ಈ ಪೈಕಿ ಜಮೀನನ್ನು ಸಕ್ರಮಗೊಳಿಸಿರುವುದಿಲ್ಲ ಹಾಗೂ ೩೫,೦೫೫ ಎಕರೆ ೩೯ ಗುಂಟೆ ಜಮೀನನ್ನು ಸಕ್ರಮಗೊಳಿಸಬೇಕಾಗಿದೆ.